ಕರ್ನಾಟಕ ಸರ್ಕಾರ

ಸಾರ್ವಜನಿಕ ಶಿಕ್ಷಣ ಇಲಾಖೆ

**ಆಯುಕ್ತರ ಕಛೇರಿ, ಹೊಸ ಸಾರ್ವಜನಿಕ ಕಟ್ಟಡಗಳು, ನೃಪತುಂಗ ರಸ್ತೆ, ಬೆಂಗಳೂರು–560001**

ಸಂಖ್ಯೆ: ಸಿ7(6) ಪ್ರಾ.ಶಿ.ಅ /ಆ.ಮಾ/ಪ/ಭಾಗ–4 /2015–16 ದಿನಾಂಕ: 03–10–2015

**–:ಜ್ಞಾ ಪ ನಾ:–**

**ವಿಷಯ :** ಘನ ಸರ್ವೋಚ್ಚ ನ್ಯಾಯಾಲಯದ ಹಾಗೂ ರಾಜ್ಯ ಉಚ್ಚ ನ್ಯಾಯಾಲಯದ ತೀರ್ಪಿನನ್ವಯ, 1994 ರ ನಂತರ ಪ್ರಾರಂಭಗೊಂಡ ಕನ್ನಡ ಮಾಧ್ಯಮದ/ಇತರೆ ಮಾಧ್ಯಮ ಶಾಲೆಗಳಿಗೆ ಆಂಗ್ಲ ಮಾಧ್ಯಮದ ಬೋಧನೆಗೆ ಅವಕಾಶ ಕೋರಿದ್ದ ಪ್ರಕರಣಗಳಲ್ಲಿ, **ದಕ್ಷಿಣಕನ್ನಡ ಜಿಲ್ಲೆ** ಜಿಲ್ಲೆಗೆ ಸಂಬಂಧಪಟ್ಟಂತೆ, 2015–16 ನೇ ಸಾಲಿನಿಂದ 1–5 ನೇ ತರಗತಿ ಆಂಗ್ಲ ಮಾಧ್ಯಮ ಬೋಧನೆಗೆ ಪರಿವರ್ತನೆ ನೀಡುವ ಬಗ್ಗೆ.

**ಉಲ್ಲೇಖ:** 1. ಮಾನ್ಯ ಸರ್ವೋಚ್ಚ ನ್ಯಾಯಾಲಯದಲ್ಲಿ ರಾಜ್ಯ ಸರ್ಕಾರವು ಸಲ್ಲಿಸಿದ್ದ ಎಸ್.ಎಲ್.ಪಿ.18139–18163 /2008 ಅನ್ನು ಸಿವಿಲ್ ಅಪೀಲ್ ಎಂದು ಪರಿಗಣಿಸಿ ಸಂವಿಧಾನ ಪೀಠಕ್ಕೆ ವರ್ಗಾವಣೆಗೊಂಡ ತರುವಾಯದಲ್ಲಿ ದಿ: 06–05–2014 ರಲ್ಲಿ ಹೊರಟಿರುವ ತೀರ್ಪು.

2. ದಿ: 06.05.2014 ರ ತೀರ್ಪಿನ ಕುರಿತು ಸಲ್ಲಿಸಲಾಗಿದ್ದ ಮರು ಪರಿಶೀಲನಾ ಅರ್ಜಿ ಸಂಖ್ಯೆ: 1878–1911/2014 ರಲ್ಲಿ ದಿ: 09.09.2014 ರಂದು ವಜಾ ಆದೇಶ. ನಂತರದಲ್ಲಿ ರಾಜ್ಯ ಸರ್ಕಾರ ದಾಖಲಿಸಿದ್ದ ಪರಿಹಾರಾತ್ಮಕ ಅರ್ಜಿಯ (Curative Petition) **ಆದೇಶ.**
3. ಸರ್ಕಾರದ ಅರೆ ಸ.ಪ.ಇಡಿ.263.ಪಿಜಿಸಿ.2015, ದಿನಾಂಕ:2–6–2015.
4. ಏಕ ಕಡತದಲ್ಲಿನ ಸರ್ಕಾರದ ಆದೇಶ ದಿನಾಂಕ:6–6–2015.
5. ಉಪನಿರ್ದೇಶಕರು ಸಾರ್ವಜನಿಕ ಶಿಕ್ಷಣ ಇಲಾಖೆ, ದಕ್ಷಿಣ ಕನ್ನಡ ಜಿಲ್ಲೆ ರವರು ನೀಡಿರುವ ಪ್ರಸ್ತಾವನೆ ದಿನಾಂಕ:26–06–2015 ಮತ್ತು ದಿನಾಂಕ:15–07–2015.
6. ಏಕ ಕಡತದಲ್ಲಿನ ಸರ್ಕಾರದ ಸುತ್ತೋಲೆ ಸಂಖ್ಯೆ:ಇಡಿ.359.ಪಿಜಿಸಿ.2015, ದಿನಾಂಕ:5–9–2015.

***********

1994–95 ರಲ್ಲಿ ಜಾರಿಗೊಳಿಸಲಾದ ಭಾಷಾ ನೀತಿ ಕುರಿತಂತೆ ಹಲವು ಸಂಸ್ಥೆಗಳು ಮೊದಲಿಗೆ ರಾಜ್ಯ ಉಚ್ಚ ನ್ಯಾಯಾಲಯದಲ್ಲಿ ಪ್ರಕರಣವನ್ನು ದಾಖಲಿಸಿದ ರಿಟ್ ಅರ್ಜಿಯಲ್ಲಿ 2008 ರಲ್ಲಿ ತೀರ್ಪು ಹೊರಬಿದ್ದು ನಂತರ ಸರ್ಕಾರವು ಘನ ಸರ್ವೋಚ್ಛ ನ್ಯಾಯಾಲಯದಲ್ಲಿ ವಿಶೇಷ ರಜಾ ಅರ್ಜಿಯನ್ನು ದಾಖಲಿಸಿ ಅಂತಿಮವಾಗಿ ದಿನಾಂಕ : 06–05–2014 ರಲ್ಲಿ ಘನ ಸರ್ವೋಚ್ಛ ನ್ಯಾಯಾಲಯದ ಸಂವಿಧಾನದ ಪೀಠವು ತೀರ್ಪು ನೀಡಿದ ಮತ್ತು ಕರ್ನಾಟಕ ರಾಜ್ಯ ಘನ ಉಚ್ಚ ನ್ಯಾಯಾಲಯ ಕೆಲವು ಪ್ರಕರಣಗಳಲ್ಲಿ, ನಿಂದನಾ ದಾವೆಯು ಸೇರಿದಂತೆ ಸರ್ವೋಚ್ಛ ನ್ಯಾಯಾಲಯದ ಆದೇಶವನ್ನು ಅನುಷ್ಟಾನಗೊಳಿಸುವಂತೆ ಆದೇಶಿಸಿದೆ. ಈ ಹಿನ್ನಲೆಯಲ್ಲಿ 01 ರಿಂದ 5ನೇ ತರಗತಿಗೆ ಆಂಗ್ಲ ಮಾಧ್ಯಮದ ಪರಿವರ್ತನೆಗೆ ಸರ್ಕಾರವು ಉಲ್ಲೇಖ–3 ಮತ್ತು 4, 5 ರಲ್ಲಿ ಅನುಮತಿ ನೀಡಿರುತ್ತದೆ.

ಉಲ್ಲೇಖ (5) ರಲ್ಲಿ ಉಪನಿರ್ದೇಶಕರು **ದಕ್ಷಿಣಕನ್ನಡ ಜಿಲ್ಲೆ** ಇವರಿಂದ ಬಂದಿರುವ ಪ್ರಸ್ತಾವನೆಗಳಲ್ಲಿ ಸದರಿ ಶಾಲೆಗಳು 01 ರಿಂದ 5ನೇ ತರಗತಿಯವರೆಗೆ ಶಾಲೆಯು ಪ್ರಾರಂಭವಾದಾಗಿನಿಂದ ನಿರಂತರವಾಗಿ ನಡೆಯುತ್ತಿದ್ದು, ಕನ್ನಡ ಮಾಧ್ಯಮದಿಂದ ಆಂಗ್ಲ ಮಾಧ್ಯಮಕ್ಕೆ ಪರಿವರ್ತನೆ ನೀಡಬಹುದೆಂದು ಉಪ ನಿರ್ದೇಶಕರು ಅಭಿಪ್ರಾಯ ನೀಡಿದ್ದಾರೆ. ಸದರಿಯವರ ಅಭಿಪ್ರಾಯ ಮತ್ತು ಉಲ್ಲೇಖದಲ್ಲಿನ ಸರ್ಕಾರದ ಆದೇಶಗಳಂತೆ, **ಕೆಳಕಂಡ 20** ಶಾಲೆಗಳಿಗೆ 2015–16ನೇ ಶೈಕ್ಷಣಿಕ ಸಾಲಿನಿಂದ 01 ರಿಂದ 5ನೇ ತರಗತಿಗಳಲ್ಲಿ ಆಂಗ್ಲ ಮಾಧ್ಯಮದಲ್ಲಿ ಬೋಧಿಸಲು ಕೆಳಗಿನ ಷರತ್ತುಗಳಿಗೊಳಪಟ್ಟು ಅನುಮತಿ ನೀಡಿ ಆದೇಶಿಸಿದೆ.

1. ಎಲ್ಲಾ ಸಂಸ್ಥೆಗಳಿಂದ ಕರ್ನಾಟಕ ಶಿಕ್ಷಣ ಕಾಯ್ದೆ ನಿಯಮಾವಳಿಗಳನ್ವಯ ನಮೂನೆ-3 ರಲ್ಲಿ ಅಗತ್ಯ ವಿವರಗಳನ್ನು ನಮೂದಿಸಿ 01 ರಿಂದ 5ನೇ ತರಗತಿ ಕನ್ನಡ ಮಾಧ್ಯಮದ ತರಗತಿಗಳನ್ನು ನಡೆಸಲು ವಿತರಿಸಲಾಗಿದ್ದ ಮೂಲ ನೋಂದಣಿ ಪ್ರಮಾಣ ಪತ್ರವನ್ನು ಉಪನಿರ್ದೇಶಕರು 15 ದಿನಗಳೊಳಗೆ ಪಡೆದು ಸಲ್ಲಿಸಿದ ನಂತರದಲ್ಲಿ ನಮೂನೆ-4 ರಲ್ಲಿ ಆಂಗ್ಲ ಮಾಧ್ಯಮಕ್ಕೆ ಪರಿಷ್ಕೃತ ನೋಂದಣಿ ಪ್ರಮಾಣ ಪತ್ರವನ್ನು ವಿತರಿಸಲಾಗುವುದು.
2. ಕ್ಷೇತ್ರ ಶಿಕ್ಷಣಾಧಿಕಾರಿಗಳು/ ಉಪ ನಿರ್ದೇಶಕರು ಶಿಫಾರಸ್ಸು ಮಾಡಿ ದೃಢೀಕರಿಸಿ ಸಲ್ಲಿಸಿರುವ ವರದಿ ಮತ್ತು ದಾಖಲೆಗಳ ಆಧಾರದ ಮೇಲೆ ಅನುಮತಿಯನ್ನು ನೀಡಲಾಗಿದೆ.
3. ಕರ್ನಾಟಕ ಶಿಕ್ಷಣ ಕಾಯ್ದೆ ನಿಯಮಾವಳಿಗಳು ಹಾಗೂ ಕಾಲದಿಂದ ಕಾಲಕ್ಕೆ ಹೊರಡಿಸಲಾಗಿರುವ ಆದೇಶ/ ಸುತ್ತೋಲೆಗಳಂತೆ ಕ್ರಮಗಳನ್ನು ಕಡ್ಡಾಯವಾಗಿ ಪಾಲಿಸತಕ್ಕದ್ದು.
4. ಕಡ್ಡಾಯ ಶಿಕ್ಷಣ ಕಾಯ್ದೆ ನಿಯಮಗಳು ಜಾರಿಯಲ್ಲಿದೆ. ಅದರಂತೆ ಅಗತ್ಯವಿರುವ ಎಲ್ಲಾ ಸೌಲಭ್ಯಗಳನ್ನು ಹಾಗೂ ಗುಣಾತ್ಮಕ ಶಿಕ್ಷಣವನ್ನು ಒದಗಿಸತಕ್ಕದ್ದು.
5. ಜಾರಿಯಲ್ಲಿರುವ ಶುಲ್ಕದ ನಿಯಮಗಳನ್ನು ಕಡ್ಡಾಯವಾಗಿ ಪಾಲಿಸತಕ್ಕದ್ದು.
6. ಮೂಲಭೂತ ಸೌಲಭ್ಯಗಳ ಕೊರತೆಯನ್ನು ಸಂಸ್ಥೆಯು ಮುಂದಿನ ದಿನಗಳಲ್ಲಿ ಸರಿಪಡಿಸಿಕೊಳ್ಳತಕ್ಕದ್ದು ಹಾಗೂ ಮೂಲಭೂತ ಸೌಲಭ್ಯಗಳ ಬಗ್ಗೆ ಪರಿಶೀಲಿಸಲಾಗುವುದು.
7. ಸಂಸ್ಥೆಯ ಯಾವುದೇ ದಾಖಲೆಗಳ ನೈಜತೆಯ ಬಗ್ಗೆ ವ್ಯತಿರಿಕ್ತ ವರದಿ ಸಲ್ಲಿಕೆಯಾದ ಪ್ರಸಂಗದಲ್ಲಿ ತಪ್ಪು ಮಾಹಿತಿ ಸಲ್ಲಿಕೆಯಾಗಿರುವುದು ಗಮನಕ್ಕೆ ಬಂದಲ್ಲಿ, ತಕ್ಷಣವೇ ಏಕಪಕ್ಷೀಯವಾಗಿ ಹಾಗೂ ಯಾವುದೇ ಸಮಜಾಯಿಷಿಗೆ ಅವಕಾಶ ನೀಡದೇ ಪ್ರಸ್ತುತ ಅನುಮತಿಯನ್ನು ಹಿಂಪಡೆಯುವ ಅಧಿಕಾರವನ್ನು ಕಾಯ್ದಿರಿಸಿಕೊಳ್ಳಲಾಗಿದೆ.
8. ಉಪ ನಿರ್ದೇಶಕರು ಪರಿವರ್ತನೆಯನ್ನು ಪರಿಗಣಿಸಿ ಅಗತ್ಯ ಕ್ರಮಗಳನ್ನು ನಿಯಮಾನುಸಾರ ಕೈಗೊಳ್ಳತಕ್ಕದ್ದು.

| ಕ್ರ.ಸಂ. | ಸಂಸ್ಥೆಯ ಹೆಸರು |
|---|---|
| 1 | ಬ್ರೈಟ್ ಮಾಡೆಲ್ ಸ್ಕೂಲ್, ಕುದ್ರೋಳಿ, ಮಂಗಳೂರು |
| 2 | ಎ.ಆರ್.ಕೆ ಪ್ರಾಥಮಿಕ ಶಾಲೆ, ಬೆಂಗ್ರೆ ಕಸಬಾ, ಮಂಗಳೂರು |
| 3. | ಮಹಾತ್ಮ ಗಾಂಧಿ ಸೆಂಟಿನರಿ ಕಿರಿಯ ಪ್ರಾಥಮಿಕ ಶಾಲೆ, ಬೋಂದೆಲ್ ಅಂಚೆ, ಮಂಗಳೂರು-8 |
| 4. | ಹಿರಾ ಪಬ್ಲಿಕ್ ಕಿರಿಯ ಪ್ರಾಥಮಿಕ ಶಾಲೆ, 6ನೇ ಬ್ಲಾಕ್, ಕೃಷ್ಣಾಪುರ, ಮಂಗಳೂರು |
| 5. | ಸ್ನೇಹ ಪಬ್ಲಿಕ್ ಸ್ಕೂಲ್, ಪಕ್ಕಲಡ್ಕ ಬಜಾಲ್, ಮಂಗಳೂರು |
| 6. | ಸೂರಜ್ ಇಂಟರ್ ನ್ಯಾಷನಲ್ ಕಿರಿಯ ಪ್ರಾಥಮಿಕ ಶಾಲೆ, ಬಿ.ಸಿ.ರೋಡ್, ಮುಡಿಪು, ಕುರ್ನಾಡು ಅಂಚೆ, ಬಂಟ್ವಾಳ.ತಾಲ್ಲೂಕು |
| 7. | ಸರೋಜಿನಿ ಮಧುಸೂಧನ ಕುಶೆ ಶಾಲೆ, ಅತ್ತಾವರ, ಮಂಗಳೂರು ದಕ್ಷಿಣ ವಲಯ |
| 8. | ಬಾಮಿ ಕಿರಿಯ ಪ್ರಾಥಮಿಕ ಶಾಲೆ, ತೆಂಕುಳಿಪಾಡಿ ಅಂಚೆ, ಗುರುಪುರ, ಮಂಗಳೂರು |
| 9. | ಇಸ್ಲಾಹಿ ಕಿರಿಯ ಪ್ರಾಥಮಿಕ ಶಾಲೆ, ಹೌಸಿಂಗ್ ಕಾಲೋನಿ, ಉಳ್ಳಾಲ, ಮಂಗಳೂರು |
| 10. | ಸಂತ ಜೋಸೆಫರ ಜೋಯ್‌ಲ್ಯಾಂಡ್ ಕಿರಿಯ ಪ್ರಾಥಮಿಕ ಶಾಲೆ, ಕೊಲ್ಯ, ಸೋಮೇಶ್ವರ , ಮಂಗಳೂರು ದಕ್ಷಿಣ ವಲಯ |
| 11. | ಎಂ.ಸಿ.ಟಿ ಕಿರಿಯ ಪ್ರಾಥಮಿಕ ಶಾಲೆ, ಕಿಲ್ಪಾಡಿ, ಮುಲ್ಕಿ, ಮಂಗಳೂರು |
| 12. | ಬುಶ್ರ ಕಿರಿಯ ಪ್ರಾಥಮಿಕ ಶಾಲೆ, ಮಾಡನ್ನೂರು ಗ್ರಾಮ, ಕಾವು ಅಂಚೆ, ಪುತ್ತೂರು ತಾಲೂಕು |
| 13. | ಭಾರತಿ ಕಿರಿಯ ಪ್ರಾಥಮಿಕ ಶಾಲೆ, ವಿದ್ಯಾನಗರ, ಕುಳಾಯಿ, ಮಂಗಳೂರು |
| 14. | ನವಚೇತನ ಕಿರಿಯ ಪ್ರಾಥಮಿಕ ಶಾಲೆ, ನೀರುಮಾರ್ಗ, ಮಂಗಳೂರು |
| 15. | ಮಾರ್ ಇವಾನಿಯೋಸ್ ಕಿರಿಯ ಪ್ರಾಥಮಿಕ ಶಾಲೆ, ವಿದ್ಯಾನಗರ ಕುಂತೂರು, ಪುತ್ತೂರು ತಾಲೂಕು |

| | |
|---|---|
| 16. | ಸೈಯ್ಯದ್ ಮದನಿ ಕಿರಿಯ ಪ್ರಾಥಮಿಕ ಶಾಲೆ, ಕಲ್ಲಾಪು, ಪೆರ್ಮನ್ನೂರು, ಮಂಗಳೂರು |
| 17. | ಐಡಿಯಲ್ ಆಂಗ್ಲ ಮಾಧ್ಯಮ ಶಾಲೆ, ಎಡಪದವು, ಶಿಬ್ರಿಕೆರೆ ಅಂಚೆ, ಮಂಗಳೂರು ತಾಲ್ಲೂಕು, ದಕ್ಷಿಣಕನ್ನಡ ಜಿಲ್ಲೆ |
| 18. | ಅಸ್ರಾರುದ್ದೀನ್ ಕಂಬಲ್ ಉರ್ದು ಪಬ್ಲಿಕ್ ಕಿರಿಯ ಪ್ರಾಥಮಿಕ ಶಾಲೆ, ಗುರುಕಂಬಳ ಕಿನ್ನಿಕಂಬಳ ಅಂಚೆ, ಮಂಗಳೂರು |
| 19. | ಸಹರಾ ಕಿರಿಯ ಪ್ರಾಥಮಿಕ ಶಾಲೆ ಕಾಂಜಿಲಕೋಡಿ, ಅಡ್ಡೂರು, ಮಂಗಳೂರು |
| 20. | ರೋಟರಿ ಕಿರಿಯ ಪ್ರಾಥಮಿಕ ಶಾಲೆ, ಕಿನ್ನಿಗೋಳಿ, ಮಂಗಳೂರು ಉತ್ತರ ವಲಯ |

ಉಪ ನಿರ್ದೇಶಕರು ವ್ಯತಿರಿಕ್ತ ಷರಾ ನೀಡಿರುವ ಪ್ರಕರಣಗಳಲ್ಲಿ 1 ರಿಂದ 5ನೇ ತರಗತಿ ಆಂಗ್ಲ ಮಾಧ್ಯಮ ಪರಿವರ್ತನೆಗೆ ಪರಿಗಣಿಸಲಾಗಿಲ್ಲ. ಅಂತಹ ಶಾಲೆಗಳ ಪಟ್ಟಿ ಕೆಳಗಿನಂತಿದೆ. ಉಪ ನಿರ್ದೇಶಕರು ರವರು ಈ ಶಾಲೆಗಳ ಕುರಿತಂತೆ ಪೂರಕವಾದ ದಾಖಲೆ ಹಾಗೂ ವರದಿ ಸಲ್ಲಿಸಿದಲ್ಲಿ ಪುನರ್ ಪರಿಶೀಲಿಸಲಾಗುವುದು.

| ಕ್ರ.ಸಂ. | 1 ರಿಂದ 5ನೇ ತರಗತಿ ಆಂಗ್ಲ ಮಾಧ್ಯಮ ಪರಿವರ್ತನೆಗೆ ಅನುಮತಿ ನೀಡದೇ ಇರುವ ಶಾಲೆಗಳ ಹೆಸರು ಮತ್ತು ವಿಳಾಸ | |
|---|---|---|
| 1. | ಮಂಗಳ ಕಿರಿಯ ಪ್ರಾಥಮಿಕ ಶಾಲೆ, ಗಾಂಧಿನಗರ , ಮಂಗಳೂರು | ದಾಖಲಾತಿ/ಹಾಜರಾತಿ ವಿವರ ಸಲ್ಲಿಸಿರುವುದಿಲ್ಲ |
| 2. | ಸ್ವಾಮಿ ಸದಾನಂದ ಸರಸ್ವತಿ ವಿದ್ಯಾಲಯ ನಂತೂರು ಪದವು , ಮಂಗಳೂರು | ದಾಖಲಾತಿ/ಹಾಜರಾತಿ ವಿವರ ಸಲ್ಲಿಸಿರುವುದಿಲ್ಲ |
| 3. | ಶಾರದ ಗಣಪತಿ ವಿದ್ಯಾಕೇಂದ್ರ ಪುಣ್ಯಕೋಟಿನಗರ , ಕೈರಂಗಳ ಗ್ರಾಮ ಮತ್ತು ಅಂಚೆ, ಬಂಟ್ವಾಳ ತಾಲೂಕು | ದಾಖಲಾತಿ/ಹಾಜರಾತಿ ವಿವರ ಸಲ್ಲಿಸಿರುವುದಿಲ್ಲ |

(ಕೆ.ಎಸ್.ಸತ್ಯಮೂರ್ತಿ)
ಆಯುಕ್ತರು
ಸಾರ್ವಜನಿಕ ಶಿಕ್ಷಣ ಇಲಾಖೆ

ಗೆ,

1. ಉಪ ನಿರ್ದೇಶಕರು, ಸಾರ್ವಜನಿಕ ಶಿಕ್ಷಣ ಇಲಾಖೆ, ದಕ್ಷಿಣಕನ್ನಡ ಜಿಲ್ಲೆ,
2. ಸಂಬಂಧಿಸಿದ ಕ್ಷೇತ್ರ ಶಿಕ್ಷಣಾಧಿಕಾರಿಗಳಿಗೆ,
3. ಸಂಬಂಧಿಸಿದ ಸಂಸ್ಥೆಗಳ ಕಾರ್ಯದರ್ಶಿಗಳಿಗೆ,
4. ಹಿರಿಯ ಸಹಾಯಕ ನಿರ್ದೇಶಕರು ಇ-ಆಡಳಿತ ಸಾರ್ವಜನಿಕ ಶಿಕ್ಷಣ ಇಲಾಖೆ, ಆಯುಕ್ತರ ಕಛೇರಿ, ಬೆಂಗಳೂರು ಇವರು ಇಲಾಖಾ ವೆಬ್‌ಸೈಟ್‌ನಲ್ಲಿ ಪ್ರಕಟಿಸಲು ಕ್ರಮ ವಹಿಸುವುದು.
5. ಕಛೇರಿ ಪ್ರತಿ.